ದಿನಾಂಕ ೧-೪-೧೯೮೫ಕ್ಕೆ ಐದು ವರ್ಷ ಸೇವೆ ಪೂರ್ಣಗೊಳಿಸಿರುವ ಹಾಗೂ ಸದರಿ ಹುದ್ದೆಗೆ ಸೇವಾಕಾತಿ ನಿಯಮಗಳಡಿಯಲ್ಲಿ ನಿಗದಿಪಡಿಸಿದ ಅರ್ಹತೆಗಳನ್ನು ಹೊಂದಿರುವ ಎಲ್ಲಾ ದಿನಗೂಲಿ ಚಾಲಕರನ್ನೂ ಖಾಯಂ ಪ್ಯವಸ್ಥೆಯಲ್ಲಿ ತತ್ಸಮಾನ ಹುದ್ದೆಗಳನ್ನು ಸೃಷ್ಟಿಸಿ ಖಾಯಂ ಗೊಳಿಸಲಾಗಿದೆ. ಉಳಿದ ದಿನಗೂಲಿ ನೌಕರರ ವಿಷಯದಲ್ಲಿ ಮುಂದಿನ ಕ್ರಮತೆಗೆದುಕೊಳ್ಳಲು ಸರ್ವೋಚ್ಚ ನ್ಯಾಯಾಲಯದ ಮುಂದಿರುವ ರಿಟ್ ಅರ್ಜಿಗಳ ತೀರ್ಮಾನಕ್ಕಾಗಿ ಕಾಯಲಾಗಿದೆ.

ಗಮನ ಸೆಳೆಯುವ ಸೂಚನೆ

ಶ್ರೀ ವಿನಯಕುಮಾರ್ ಸೂರಕೆ.—ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಇದಕ್ಕೆ ನನಗೆ ಸ್ವಲ್ಪ ಕಾಲಾವಕಾಶ ಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳಿಗೆ ಅವಕಾಶ ಬೇಕಾಗಿದೆಯಂತೆ ನಾಳೆ ಇದನ್ನು ತೆಗೆದುಕೊಳ್ಳುತ್ತೇನೆ ಅವರಿಗೆ ಟೈಮು ಬೇಕೆಂದು ಹೇಳಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—ನನ್ನ ಕೆಲವು ವಿಷಯಗಳ ಬಗ್ಗೆಯೂ ಮಾನ್ಯ ಮಂತ್ರಿಗಳು ಸಮಯವನ್ನು ತೆಗೆದುಕೊಂಡಿದ್ದಾರೆ. ಬೇಗ ಉತ್ತರವನ್ನು ತರಿಸಿಕೊಡಬೇಕು.

ಅಧ್ಯಕ್ಷರು.—ಈಗ ೫೨೦ ಕೋಟಿ ರೂಪಾಯಿಗಳ ವಿದ್ಯಾ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಯನ್ನು ನೀವು ಪ್ರಾರಂಭ ಮಾಡಬೇಕಾದುದಿದೆ. ನಾಳೆಯೋ ನಾಡಿದ್ದೋ ತಮ್ಮ ಉತ್ತರವನ್ನು ತರಿಸಿಕೊಡುತ್ತೇನೆ.

ಸುಳ್ಯ ತಾಲ್ಲೂಕು ಮರ್ತಂಜಿ ಗ್ರಾಮದಲ್ಲಿ ಎಲ್ಸಿಕ್ಕ ಎನ್ನುವವರ ಮನೆಯಲ್ಲಿ ದರೋಡೆಯಾಗಿರುವುದು.

೧೨-೦೦ ಪಿ. ಎಂ.

ಶ್ರೀ ಕೆ. ಕಂಶಾಲ.—ಅಧ್ಯಕ್ಷರೇ, ಇತ್ತೀಚೆಗೆ ಸುಳ್ಯ ತಾಲ್ಲೂಕಿನ ಮರ್ತಂಜಿ ಗ್ರಾಮದಲ್ಲಿ ಎಲ್ಸಿಕ್ಕ ಎಂಬವರ ಮನೆಯಲ್ಲಿ ಕಳ್ಳತನ, ಕೊಲೆ ತೋರಿಸಿ ದರೋಡೆ ಮಾಡಿರುವ ಬಗ್ಗೆ ಗೃಹ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—ದಿನಾಂಕ ೮-೨-೮೭ರಂದು ಫಿರ್ಯಾದಿಯವರ ಮನೆಯಲ್ಲಿ ಡಕಾಯಿತಿ ಮಾಡಲು ಬಂದಾಗ ಆಪಾದಿತರು ಬಿಟ್ಟು ಹೋದ ೭ ಇಂಚು ಉದ್ದವಾದ ಚೂರಿಯನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಸಂಶಯಾಸ್ಪದ ಆಪಾದಿತರಾದ ಜನಾರ್ಧನ ಪೂವಪ್ಪ ಮತ್ತು ಪುಟ್ಟಣ್ಣನವರನ್ನು ದಿನಾಂಕ ೯-೨-೮೭ರಂದು ಬಂಧಿಸಲಾಯಿತು. ಅವರನ್ನು ಸುಳ್ಯದ ಜೆ. ಎಂ. ಎಫ್. ಸಿ. ನ್ಯಾಯಾಲಯವು ದಿನಾಂಕ ೧೬-೨-೮೭ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ. ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದೆ. ನಿಜವಾದ ಆಪಾದಿತರನ್ನು ಹಿಡಿಯಲು ಪ್ರಯತ್ನ ಮಾಡಲು ವಿಚಾರಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಕೆ. ಕಂಶಾಲ.—ಅಲ್ಲಿ ದರೋಡೆ ನಡೆದಿದ್ದು ಕಂಪ್ಲೇಂಟ್ ಕೊಟ್ಟಮೇಲೆ ಅಲ್ಲಿ ಸಿಕ್ಕಿರತಕ್ಕ ಆಧಾರಗಳು ಇದಕ್ಕೆ ಪುಷ್ಟಿ ಕೊಡದ ಕಾರಣ ಕೇಸನ್ನು ಸಡಿಲಿಸಲಾಗಿದೆ ಎಂಬ ವಿಷಯವು ನಿಜವೇ ?

ಶ್ರೀ ಬಿ. ರಾಚಯ್ಯ.—ಈ ಬಗ್ಗೆ ಇಬ್ಬರು ಸಂಶಯಾಸ್ಪದ ವ್ಯಕ್ತಿಗಳನ್ನು ಹಿಡಿದು ಕೋರ್ಟಿಗೆ ಹಾಜರುಪಡಿಸಿದ ಮೇಲೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ನಿಜವಾದ ಆಪಾದಿತರು ಯಾರು ಎನ್ನುವ ಬಗ್ಗೆ ತಿಳಿಯಲೋಸುಗ ಸ್ಪೆಷಲ್ ಟೀಮ್‌ನ್ನು ಕಳುಹಿಸಲಾಗಿದೆ ಇಂತಹ ಪ್ರಕರಣಗಳು ಎಲ್ಲೆಲ್ಲಿ ನಡೆದಿದೆ ಅಲ್ಲಲ್ಲಿ ಸಾಕಷ್ಟು ವಿವರಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಈ ರೀತಿಯ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಘಟಕ ಪೋಲೀಸ್ ಅಧಿಕಾರಿಗಳಿಗೂ ಕೆಳಕಂಡಂತೆ ಆದೇಶ ನೀಡಲಾಗಿದೆ.

೧ ಅಪರಾಧದ ಮಾದರಿಗಳಂತೆ. ಕಳ್ಳರ ಹಾಗೂ ಪೂರ್ವಸಜಾಪಟ್ಟಿ, ಅಸಾಮಿಗಳ ಪಟ್ಟಿಯನ್ನು ತಯಾರಿಸಿ, ಆ ಪ್ರಕಾರ ಪ್ರತಿಯೊಬ್ಬ ಬದ್ಮಜಾಲರ (ಅನುಮಾನಾಸ್ಪದ ವ್ಯಕ್ತಿಗಳ) ಚಲನವಲನದ ಬಗ್ಗೆ ಸೂಕ್ತ ನಿಗಾ ಇಡಲು ಜಿಲ್ಲಾವಾರು ಪೋಲೀಸ್ ತಂಡವನ್ನು ಸ್ಥಳೀಯ ಪೋಲೀಸ್ ವರ್ಗದಲ್ಲೇ ನಿರ್ಮಿಸಿ ಸದರಿ ತಂಡವು ರಾಜ್ಯದ ಅಪರಾಧ ತನಿಖಾ ಇಲಾಖೆಯ ಉಸ್ತುವಾರಿಯಲ್ಲಿದ್ದು ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆಗೊಳಿಸಲಾಗಿದೆ.

೨ ಕಳವು ಮಾಲನ್ನು ಪಡೆಯುವವರ ಪಟ್ಟಿಯನ್ನು ತಯಾರಿಸಿ, ಅವರುಗಳ ಮೇಲೆ ಸೂಕ್ತ ನಿಗಾವಣೆ ಇಡಲು ಆದೇಶ ನೀಡಲಾಗಿದೆ.

೩ ಬದ್ಮಜಾಲ ಜನರು ವಿಶೇಷವಾಗಿ ಸಂದರ್ಶಿಸುವ ಸ್ಥಳಗಳಾದ, ಹೆಂಡ ಮತ್ತು ಸಾರಾಯಿ ಅಂಗಡಿಗಳು ವೇಶ್ಯಾವೃತ್ತಿಯಲ್ಲಿರುವವರ ಮನೆಗಳು, ಜೂಜಾಟಕ್ಕೆಟ್ಟಿಗಳು ಹಾಗೂ ಬಾರ್ಸ್ ಮತ್ತು ರೆಸ್ಟೋರೆಂಟ್‌ಗಳ ಬಳಿ ಸೂಕ್ತ ನಿಗಾವಣೆ ಇಡುವಂತೆ ಆದೇಶಿಸಲಾಗಿದೆ.

೪ ರಾಷ್ಟ್ರೀಯ ಹಾಗೂ ರಾಜ್ಯದ ಹೆದ್ದಾರಿಗಳಲ್ಲಿ ಗಸ್ತು ತಿರುಗಲು ಸೂತನ ಸಲಕರಣೆ ಕೊಂದಿಗೆ ಸಾಕಷ್ಟು ಪ್ರಮಾಣದ ಒಂದು ಪೋಲೀಸ್ ತುಕ್ಕಡಿಯನ್ನು ವ್ಯವಸ್ಥೆಗೊಳಿಸಲಾಗಿದೆ. ಸದರಿ ತುಕ್ಕಡಿಯು ತಮ್ಮ ಗಸ್ತಿನ ವೇಳೆಯಲ್ಲಿ ಅನುಮಾನ ಬಂದಂತಹ ಎಲ್ಲಾ ವಾಹನಗಳನ್ನು ಪರಿಶೀಲಿಸುವಂತೆ ಆದೇಶ ನೀಡಲಾಗಿದೆ. ರಾಷ್ಟ್ರೀಯ ಹಾಗೂ ರಾಜ್ಯದ ಹೆದ್ದಾರಿಗಳಲ್ಲಿ ಗಸ್ತು ತಿರುಗಲು ಸೂತನ ಸಲಕರಣೆಗ ಕೊಂದಿಗೆ ಸಾಕಷ್ಟು ಪ್ರಮಾಣದ ಒಂದು ಪೋಲೀಸ್ ತುಕ್ಕಡಿಯನ್ನು ವ್ಯವಸ್ಥೆಗೊಳಿಸಲಾಗಿದೆ.

೫ ಹಳ್ಳಿ ಹಾಗೂ ಪಟ್ಟಣಗಳ ಹಗಲು ಮತ್ತು ರಾತ್ರಿ ಗಸ್ತುಗಳನ್ನು ವ್ಯವಸ್ಥಿತವಾಗಿ ಬಿಗಿಗೊಳಿಸಲಾಗಿದ್ದು ಸದರಿ ಗಸ್ತುಗಳ ಉಸ್ತುವಾರಿಯನ್ನು ಪೋಲೀಸ್ ಅಧಿಕಾರಿಗಳು ದಿನವಹಿ ಉಸ್ತುವಾರಿ ನಿರ್ವಹಿಸುವಂತೆ ಆದೇಶಿಸಲಾಗಿದೆ.

೬ ವಿಮಾನ ನಿಲ್ದಾಣ, ಲಂಗಿಬಂಡಿ ನಿಲ್ದಾಣ, ಬಸ್ಸು, ನಿಲ್ದಾಣಗಳಲ್ಲಿ ಪೋಲೀಸರನ್ನು ಸಾದಾ ಉಡುಗೆಯಲ್ಲಿ ನೇಮಕ ಮಾಡಲಾಗಿದೆ. ಸದರಿಯವರು ಸೂಕ್ತ ನಿಗಾವಣೆಯನ್ನು ಸುತ್ತಮುತ್ತಲು ತಂಡ ತಂಡವಾಗಿರುವ ಜನರ ಚಲನವಲನದ ಬಗ್ಗೆ ನಿಗಾ ಇಡುವಂತೆ ವ್ಯವಸ್ಥೆಗೊಳಿಸಲು ಆದೇಶಿಸಲಾಗಿದೆ. ಸದರಿ ಪೋಲೀಸ್‌ನವರಿಗೆ ಆಧುನಿಕ ಉಪಕರಣಗಳನ್ನು ಒದಗಿಸಲು ವಿವರ್ಪಾಡು ಮಾಡುವಂತೆ ಆದೇಶ ನೀಡಲಾಗಿದೆ.

೭ ಅಕ್ಕಪಕ್ಕದ ರಾಜ್ಯಗಳ ಪೋಲೀಸ್ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ದಿಢೀರ್ ಆಗಿ ರಾಜ್ಯದ ಮಂಖ್ಯೆ ಹೆದ್ದಾರಿಗಳಲ್ಲಿ ತನಿಖೆ ನಡೆಯಿಸಿ, ವಾಹನಗಳನ್ನು ಜಪ್ತಿ ಮಾಡುವಂತೆ ಆದೇಶ ನಿಡ ಲಾಗಿದೆ. ಇದೂ ಅಲ್ಲದೆ ರಾಜ್ಯದ ಮೇರೆಯ ಅಂಚಿನಲ್ಲಿ ಹೆದ್ದಾರಿಗಳಲ್ಲಿ ಒಂದೊಂದು ಆಧುನಿಕ ಉಪ ಕರಣಗಳೊಂದಿಗೆ ಚೆಕ್ ಪೋಸ್ಟ್‌ಗಳನ್ನು ತೆರೆಯುವಂತೆ ಆದೇಶಿಸಲಾಗಿದೆ.

೮ ದಸ್ತಗಿರಿಯಾದ ವ್ಯಕ್ತಿಯ ಬೆರಳು ಗುರುತುಗಳನ್ನು ತಕ್ಷಣವೇ ತೆಗೆದು ಕೂಡಲೇ ಎಫ್‌ಪಿಬಿಗೆ ಕಳುಹಿಸುವಂತೆ ಆದೇಶಿಸಲಾಗಿದೆ.

೯ ರಾಜ್ಯದ ಅಪರಾಧ ತನಿಖಾ ಇಲಾಖೆಯ ಮೇಲ್ವಿಚಾರಣೆಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಈ ತರಹ ಪ್ರಕರಣಗಳ ತನಿಖೆಗಾಗಿ ನುರಿತ ಉಪ ಅರಕ್ಷಕ ಅಧೀಕ್ಷಕರು ಅಥವಾ ನುರಿತ ಅರಕ್ಷಕ ನಿರೀಕ್ಷಕ ರನ್ನು ಒಳಗೊಂಡಂತೆ ವಿಶೇಷ ದಳಗಳನ್ನು ಸಾಕಷ್ಟು ಸಿಬ್ಬಂದಿ ಮತ್ತು ಆಧುನಿಕ ಉಪಕರಣಗಳೊಂದಿಗೆ ನೇಮಿಸುವಂತೆ ಆದೇಶ ನೀಡಲಾಗಿದೆ.

೧೦ ಈ ರೀತಿ ವ್ಯವಸ್ಥೆಗೊಳಿಸಿ ಪತ್ತೆ ಮಾಡಲಾದ ಪ್ರಕರಣಗಳಲ್ಲಿ ಸಿಬ್ಬಂದಿಗೆ ಸೂಕ್ತ ಉತ್ತೇಜನ ಕೊಡಲು ಆದೇಶಿಸಲಾಗಿದೆ.

ಶ್ರೀ ಕೆ. ಕುಶಾಲ. —ಗ್ರಾಮಾಂತರ ಪ್ರದೇಶಗಳವರು ದರೋಡೆ ಮಾಡಿದ್ದಾರೆಂದು ದೋಷಾರೋಪಣೆ ಹೊರಿಸಿ ಅವರುಗಳ ಮೇಲೆ ಪೋಲೀಸ್‌ನವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಕಳ್ಳತನ ಮಾಡಿರುವವರು ಬೇರೆ ಕಡೆಗಳಿಂದ ಬಂದು ಕಳ್ಳತನ ಮಾಡಿದ್ದಾರೆ ಈಗ ಇದರ ಬಗ್ಗೆ ಯಾರು ಕಳು ತನ ಮಾಡಿದ್ದಾರೆನ್ನುವುದು ಗೊತ್ತಾಗಬೇಕಾದರೆ ಸಿ.ಓ.ಡಿ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ರಾಚಯ್ಯ —ಜಿಲ್ಲೆಯೊಂದು ತುಕಡಿಯನ್ನು ನೇಮಕ ಮಾಡಿದ್ದೇವೆ, ಅವರು ಎನ್‌ಕ್ವೈರಿ ಮಾಡಿ ಆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ.